File No: WCDSEC/131/PHP/2019-WCD_SEC_C-WOMEN AND CHILD WELFARE SEC

# ಕರ್ನಾಟಕ ಸರ್ಕಾರ

ಸಂಖ್ಯೆ:ಮಮಇ 131 ಪಿಹೆಚ್ ಪಿ 2019

ಕರ್ನಾಟಕ ಸರ್ಕಾರ ಸಚಿವಾಲಯ
3ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:10.10.2019

## ಸುತ್ತೋಲೆ

ವಿಷಯ: ಅಂಗವಿಕಲ ವ್ಯಕ್ತಿಗಳ ಅಧಿನಿಯಮ-2016ರ ಕಲಂ 15 ರ ಮೇರೆಗೆ ಅಂಗವಿಕಲರಿಗೆ ಕಾನೂನಿನಲ್ಲಿ ನೀಡಲಾಗಿರುವ ಅರ್ಹತೆಬಾಧ್ಯತೆಗಳ ಬಗ್ಗೆ ಸಮೂಹದಲ್ಲಿ ಅರಿವು ಮೂಡಿಸಲು ಇಲಾಖೆಗಳಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಂಗವಿಕಲ ವ್ಯಕ್ತಿಗಳ ಅಧಿನಿಯಮ-2016 ದಿ.27.12.2016 ರಿಂದ ಜಾರಿಗೆ ಬಂದಿದ್ದು, ಈ ಅಧಿನಿಯಮದ ಕಲಂ 15(1) ರಲ್ಲಿ ಅಂಗವಿಕಲರಿಗೆ ಕಾನೂನಿನಲ್ಲಿ ನೀಡಲಾಗಿರುವ ಅರ್ಹತೆ, ಹಕ್ಕು ಬಾಧ್ಯತೆಗಳ ಬಗ್ಗೆ ಸಮೂಹದಲ್ಲಿ ಪ್ರಚಾರಪಡಿಸಿ ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಹಾಗೂ ವಿಕಲಚೇತನರು ಅವುಗಳನ್ನು ಪಡೆಯುವಂತೆ ಅನುವು ಮಾಡಿಕೊಡಲು ಸರ್ಕಾರ ಒಬ್ಬ ಅಥವಾ ಇನ್ನು ಹೆಚ್ಚಿನ ಸಂಖ್ಯೆಯ ಅಧಿಕಾರಿಗಳನ್ನು ನೇಮಿಸಬೇಕೆಂದು ತಿಳಿಸಲಾಗಿದೆ.

ಕಲಂ-15 (2) ರಲ್ಲಿ ಮೇಲಿನ 1 ನೇ ಕಂಡಿಕೆಯಲ್ಲಿ ಹೇಳಿರುವ ಅಧಿಕಾರಿಗಳು ಸಂಸ್ಥೆಗಳ ಆಶ್ರಯಗಳಲ್ಲಿ ಇರಬಹುದಾದ ಅಂಗವಿಕಲರು ಮತ್ತು ಅಧಿಕ ಆಸರೆ ಅವಶ್ಯವಿರುವ ಅಂಗವಿಕಲರಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಪಡೆಯಲು ಅಗತ್ಯವಾದ ಎಲ್ಲಾ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಇಲಾಖೆಗಳಲ್ಲಿ ಮೇಲಿನ ಕಂಡಿಕೆಗಳ ಅನುಸಾರ ಅಂಗವಿಕಲರಿಗೆ ಕಾನೂನಲ್ಲಿ ನೀಡಲಾಗಿರುವ ಅರ್ಹತೆ ಹಕು ಬಾಧ್ಯತೆಗಳ ಬಗ್ಗೆ ಸಮೂಹದಲ್ಲಿ ಪ್ರಚಾರಪಡಿಸಿ ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಹಾಗೂ ಅಂಗವಿಕಲರ ಸೌಲಭ್ಯಗಳನ್ನು ಪಡೆಯುವಂತೆ ಅನುವು ಮಾಡಿಕೊಡಲು ತಮ್ಮ ಇಲಾಖೆಯಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿ ಆದೇಶ ಹೊರಡಿಸಲು ಹಾಗೂ ಈ ಸಂಬಂಧ ನೇಮಕಮಾಡಿದ ಅಧಿಕಾರಿ ಹೆಸರು, ಪದನಾಮ, ವಿಳಾಸ ಹಾಗೂ ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಬೆಂಗಳೂರು ಇವರಿಗೆ ತಿಳಿಸಲು ಕೋರಲಾಗಿದೆ.

(ರಾಕೇಶ್ ಸಿಂಗ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃಧ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ, ಬೆಂಗಳೂರು

ಪ್ರತಿಯನ್ನು:

1. ಎಲ್ಲಾ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಮುಂದಿನ ಕ್ರಮಕ್ಕಾಗಿ.
2. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ನಿರ್ದೇಶನಾಲಯ, ಬೆಂಗಳೂರು.
3. ಕಛೇರಿ ಪ್ರತಿ.